ಕಟ್ಟಡಗಳನ್ನು ನೋಡಿ ವಿಸ್ಮಯಗೊಳ್ಳುತ್ತೇವೆ; ಆದರೆ ಮಾನವನ ವಾಸಕ್ಕೆ ಅನುಕೂಲಕರವಾದ ಮನೆಗಳು ಈ ಎಲ್ಲ ಕಟ್ಟಡಗಳಿಗಿಂತ ಮುಖ್ಯವಾಗಿವೆ ಎಂಬ ಅಂಶ ಇಂದಿಗೂ ಮುಂದುವರಿದಿದೆ. ಗ್ರಾಮ, ನಗರ, ಅರಣ್ಯ, ಗುಡ್ಡಗಾಡು – ಹೀಗೆ ಭೌಗೋಳಿಕ, ಸಾಮಾಜಿಕ ಭಿನ್ನತೆಗಳಿಂದಾಗಿ ವಿವಿಧ ಬಗೆಯ ನಿವಾಸಗಳು ಜನಜೀವನದಲ್ಲಿ ಕಂಡು ಬರುವುದಿದ್ದರೂ, 'ಮನೆಯೇ ಇಲ್ಲದ' ಮಾನವನ ಬದುಕನ್ನು ಊಹಿಸುವುದು ಇಂದಿಗೂ ಅಸಾಧ್ಯವಾಗಿದೆ.

### ಸಹಬಾಳ್ವೆಯ ಸಂಕೇತ

ಪ್ರಾಣಿಗಳು ಹಿಂಡುಹಿಂಡಾಗಿ, ಮಂದೆಮಂದೆಗಳಾಗಿ ಮೇಯುತ್ತವೆ, ಬದುಕುತ್ತವೆ. ಪಕ್ಷಿಗಳಾದರೆ ತಮ್ಮದೇ ಗೂಡು ಕಟ್ಟಿಕೊಳ್ಳುತ್ತವೆ. ಜೇಡ ಬಲೆ ಹೆಣೆದು ತನ್ನದೇ ಮನೆ ಮಾಡಿಕೊಳ್ಳುತ್ತದೆ. ಇದೆಲ್ಲಕ್ಕಿಂತ ಭಿನ್ನವಾಗಿ ಮನುಷ್ಯ ಭೂಮಿಯ ಮೇಲೊಂದು ಕಟ್ಟಡ ಕಟ್ಟಿಕೊಂಡದ್ದೇಕೆ? ಉತ್ತರ ಸ್ಪಷ್ಟವಾಗಿದೆ: ಪ್ರಕೃತಿಯಲ್ಲಿ ಲಭ್ಯವಿರುವ ವಸ್ತುಗಳನ್ನು ತನ್ನ ಉಪಯೋಗಕ್ಕಾಗಿ ಬಳಸಿಕೊಳ್ಳುವ ವಿಧಾನ ಅವನ ಅರಿವಿನಲ್ಲಿ ಮೂಡಿಬಂತು. ಇದರ ಜೊತೆಯಲ್ಲೇ ಒಂದು ಕುಟುಂಬ, ಗಂಡ-ಹೆಂಡತಿ-ಮಕ್ಕಳು, ಅಣ್ಣ-ತಮ್ಮಂದಿರು-ಇವರೆಲ್ಲ ಒಟ್ಟಿಗೆ ಬದುಕುವ ಒಂದು ಪದ್ಧತಿ ಬೆಳೆದುಬಂತು. ಒಟ್ಟಾಗಿ ಬದುಕುವ ವಿಧಾನ ಮಾನವನಿಗೆ ಹೊಸದಲ್ಲ, ಪ್ರಾಣಿಪಕ್ಷಿಗಳಲ್ಲೂ, ಇರುವೆಗಳಂಥ ಜೀವಿಗಳಲ್ಲೂ ಅದು ಇದ್ದೇ ಇದೆ. ಆದರೆ ಮಾನವನ ಸಂತತಿ ವೃದ್ಧಿಯಾದಂತೆಲ್ಲ ಹೆಚ್ಚು ಮನೆಗಳ ರಚನೆ, ಹೆಚ್ಚು ಕುಟುಂಬಗಳ ವಿಂಗಡಣೆ ಅನಿವಾರ್ಯವಾಯಿತು. ಆದರೂ ಹಿಂದೆ ಅವಿಭಕ್ತ ಕುಟುಂಬಗಳಲ್ಲಿ ನಲುವತ್ತು-ಐವತ್ತು ಮಂದಿ ಒಂದೇ ಮನೆಯಲ್ಲಿ ವಾಸಿಸುತ್ತಿದ್ದ ಉದಾಹರಣೆಗಳೂ ಇವೆ. ಎಲ್ಲ ಪ್ರೀತಿ, ವಿಶ್ವಾಸ, ಜಗಳ, ಘರ್ಷಣೆಗಳ ನಡುವೆಯೂ ಅಷ್ಟೊಂದು ಮಂದಿ ಒಟ್ಟಾಗಿ ಬದುಕುವುದರ ಹಿಂದಿದ್ದ ಉದ್ದೇಶ ಏನಿರಬಹುದು? ರಕ್ತಸಂಬಂಧ, ಸಹೋದರ ಕುಟುಂಬಗಳ ಸಹಬಾಳ್ವೆ, ಹಾಗೂ ಹಿರಿಯ-ಕಿರಿಯ ತಲೆಮಾರುಗಳ ಪರಂಪರಾಗತ ಜೀವನ ಪದ್ಧತಿಯೆ?

ಮನೆಯೆಂಬುದು ಒಂದು ಕುಟುಂಬದ ಒಂದು ಘಟಕವಾದಂತೆ, ಹತ್ತಾರು-ನೂರಾರು ಮನೆಗಳು ಸೇರಿ ಒಂದು ಹಳ್ಳಿಯ ರಚನೆಯಾಯಿತು. ಒಂದು ಮನೆಯೊಳಗಿನ ಜೀವನವು ಮನೆ-ಮನೆಗಳ ನಡುವಿನ ಸಹಬಾಳ್ವೆಯೂ ಆಗಿ ಕ್ರಮೇಣ ರೂಪುಗೊಂಡಿತು. ಹೀಗೆ ಸಮಾಜದ ರಚನೆ ನಿಧಾನವಾಗಿ ಬದಲಾಗುತ್ತ, ಪಟ್ಟಣ-ವ್ಯವಹಾರ-ಉದ್ದಿಮೆಗಳು ಆರಂಭಗೊಂಡವು. ನಗರಜೀವನದ ಸಂಕೀರ್ಣ ಸಂಬಂಧಗಳು, ಆರ್ಥಿಕ ಏರುಪೇರುಗಳು ಜೀವನವನ್ನು ಎಷ್ಟೇ ಬದಲಾಯಿಸಿದರೂ 'ಮನೆ'ಯೆಂಬ ಮೂಲಭೂತ ಕಲ್ಪನೆ ಬದಲಾಗದೆ ಮುಂದುವರಿದುಕೊಂಡು ಬಂತು. ಕಾಲಕಾಲಕ್ಕೆ 'ಮನೆ'ಯ ಸ್ವರೂಪ ಬದಲಾಯಿತು; ಅದೇ ರೀತಿ ಭಾವನಾತ್ಮಕ ಅಂಶಗಳೂ ಬದಲಾದವು.

### ಆಧುನಿಕತೆ ಮತ್ತು 'ಮನೆ'

ಬಾಡಿಗೆ ಮನೆ, ಅಪಾರ್ಟ್‌ಮೆಂಟ್, ಬಂಗಲೆ, ಗೆಸ್ಟ್‌ಹೌಸ್, ಲಾಡ್ಜ್ – ಇತ್ಯಾದಿ ವಾಸಸ್ಥಾನಗಳು 'ಮನೆ'ಯೆಂಬ ಕಲ್ಪನೆಯನ್ನು ಆಧುನಿಕ ಜೀವನ ಶೈಲಿಗೆ ತಕ್ಕಂತೆ ಬದಲಾಯಿಸಿವೆ. ಹಿಂದೆ ಆದಿವಾಸಿಗಳು ವಾಸಿಸುತ್ತಿದ್ದ ಗುಹೆಗೂ, ಹಳ್ಳಿಯ ಗುಡಿಸಿಲಿಗೂ, ಇಂದಿನ ಗಗನಚುಂಬಿ ಕಟ್ಟಡದ ಹದಿನೈದನೇ ಮಹಡಿಯ ಅಪಾರ್ಟ್‌ಮೆಂಟ್ ಮನೆಗೂ ಏನು ವ್ಯತ್ಯಾಸ? ಬಾಹ್ಯ ರಚನೆಯಲ್ಲಿ ವ್ಯತ್ಯಾಸವಿದೆ, ಸುತ್ತಣ ಪರಿಸರ ಭಿನ್ನವಾಗಿದೆ; ಆದರೆ ಜನ ಅದೇ ರೀತಿ 'ಒಂದು ಸೂರಿನಡಿ' ಬದುಕುತ್ತಿದ್ದಾರೆ. ಅಂದಿನಂತೆ ಇಂದೂ ಸುರಕ್ಷಿತತೆ, ನೆಮ್ಮದಿ, ವಿಶ್ರಾಂತಿ – ಇವೇ ಮುಖ್ಯವಾಗಿವೆ. ಮೂಲಭೂತ ಆವಶ್ಯಕತೆಯಾಗಿ ನಿವಾಸ-ಎಂಬ ಅಂಶ ಹಾಗೆಯೇ ಮುಂದುವರಿದಿದೆ. ಅದರ ಹಿಂದೆ ಇದ್ದ 'ನಮ್ಮ ಮನೆ' ಎಂಬ ಭಾವನಾತ್ಮಕ ಅಂಶ ತುಸು ವಿರಳವಾಗಿದೆಯೆನ್ನಬಹುದು. ಬಾಡಿಗೆ ಮನೆ, ಲಾಡ್ಜ್ ಇಂಥ ನಿವಾಸಗಳು ನಮ್ಮವು ಹೇಗಾಗುವವು?

ನಗರ ಜೀವನದಲ್ಲಿ ಸೈಟ್ ಕೊಂಡುಕೊಳ್ಳುವುದು, ಮನೆ ನಿರ್ಮಾಣ, ಅದರ ನೂರೆಂಟು ಜಂಜಾಟ ಇತ್ಯಾದಿಗಳೆಲ್ಲ ಭಾವನಾತ್ಮಕ ಸಂಬಂಧಕ್ಕಿಂತ, ಕ್ಲಿಷ್ಟಕರವಾದ ಗೊಂದಲಗಳನ್ನು ನಿರ್ಮಿಸಿಬಿಡುತ್ತಿವೆ. ವ್ಯಾವಹಾರಿಕ ಬದುಕಿನ ಸಂಘರ್ಷಗಳು ಬೇಸಗೆಯ ಬೆವರಿಳಿಸುವ ಬವಣೆಯಂತೆ. ಗ್ರಾಮೀಣ ಪರಿಸರದಲ್ಲಿ 'ನಮ್ಮ ಮನೆ' ಎಂಬ ಆಪ್ಯಾಯಮಾನ ಸ್ಥಳವೊಂದು ಹುಟ್ಟಿಸುವ ಭಾವನೆಯೇ ಬೇರೆ, ನಗರದಲ್ಲಿ ನಾವು ಬದುಕುವ ಸ್ಥಳ ನಮಗೆ ಯಾಂತ್ರಿಕ ರೂಪದ ಅನುಕೂಲವನ್ನು ಸೃಷ್ಟಿಸುವ ಒಂದು ತಾಣವಾಗಿ ಗೋಚರಿಸುವ ಬಗೆಯೇ ಬೇರೆ. ಆದರೂ ನಾವು ಇಂತಹ ಬದುಕನ್ನು ಒಪ್ಪಿಕೊಂಡಿದ್ದೇವೆ. 'ಒಂದು ಮನೆ ಇರಬೇಕು' ಎಂಬ ತತ್ತ್ವವು ನಮ್ಮ ಬದುಕಿನ ಸೂತ್ರವೇ ಆಗಿದೆ.

### ಮನೆ: ಆಧ್ಯಾತ್ಮಿಕ ದೃಷ್ಟಿ

ಭಾರತೀಯ ಜೀವನ ದೃಷ್ಟಿಯಲ್ಲಿ ಆಧ್ಯಾತ್ಮಿಕತೆ ಹಾಸುಹೊಕ್ಕಾಗಿದೆ. ಇದರ ದ್ಯೋತಕವಾಗಿ ನಾವು ವಾಸ ಮಾಡುವ ಮನೆ ಕೇವಲ ಒಂದು ಕಟ್ಟಡವಾಗಿರದೆ, ಅದು ಜೀವನದ ಆಧಾರಸ್ತಂಭವೆನಿಸಿದೆ. ಭಾರತೀಯರು ನಮ್ಮ ಪವಿತ್ರ ನೆಲವನ್ನು ತಾಯಿಯೆಂದು, ನಮ್ಮ ನಿವಾಸದ ಮನೆಯನ್ನು ಭಗವಂತನ ಆವಾಸಸ್ಥಾನವೆಂದು ಪರಿಗಣಿಸಿರುವುದು ಅತ್ಯಂತ ಸಹಜವಾಗಿದೆ. ಆದ್ದರಿಂದ ಒಂದು ಮನೆಯ ನಿರ್ಮಾಣಕ್ಕೆ ಮೊದಲೇ, ಒಂದು ಮುಹೂರ್ತ ನಿಗದಿ ಮಾಡುವುದು, 'ಗುದ್ದಲಿಪೂಜೆ'ಯೊಂದಿಗೆ ನಿರ್ಮಾಣದ ಆರಂಭ, ಮುಂದೆ ಮನೆ ನಿರ್ಮಾಣವಾದ ನಂತರ ಪವಿತ್ರ ಗೋಮಾತೆಯನ್ನು ಮನೆಯೊಳಕ್ಕೆ ಕರೆದುಕೊಂಡು ಬರುವುದು, ಸಮೃದ್ಧಿಯ ಚಿಹ್ನೆಯಾಗಿ ಹಾಲು ಕುದಿಸಿ ಉಕ್ಕಿಸುವುದು, ಇದರೊಂದಿಗೆ ವಿವಿಧ ಪೂಜೆ, ಕುಲದೇವತೆ-ಮನೆ